ಕೂಡಿಸಿದಾಗ ಸುಬ್ಬಿ ಗಾಬರಿ ಆತಂಕದಿಂದ ಬ್ಬೆ... ಬ್ಬೆ... ಬ್ಬೆ... ಎನ್ನುವಂತಾಯ್ತು. 'ಅವ್ವಾ ಇದೇನು?'

'ಲಗ್ನ ಸುಬ್ಬಿ ನಿಂದ ಲಗ್ನ, ತಗೋ ಬಂಡೆಪ್ಪಗ ಮಾಲಿಹಾಕು. ಆಚಾರ್ಯರೆ ಮಂತ್ರ ಹೇಳ್ರಿ, ಇಕಾ ತಗೋ ಬಂಡೆಪ್ಪ ಮಂಗಳಸೂತ್ರ ಕಟ್ಟು...' ಅಚ್ಚಕ್ಕನ ಸಂಭ್ರಮ, ಮಾತುಗಳಲ್ಲಿ ಸುಬ್ಬಿಗೆ ತತ್ತರಿಸುವಂತಾಯ್ತು.

'ಅವ್ವಾ, ನಾ ಒಲ್ಲೆ ಬಂಡೂಮಾವನ್ನ ನಾ ಲಗ್ನಾ ಆಗಂಗಿಲ್ಲ.'

'ಹುಚ್ಚ ಖೋಡಿ ಸುಮ್ನಿರು. ಇವನಿಗಿಂತಾ ಛಲೋ ವರಾ ಎಲ್ಲಿ ಸಿಗಬೇಕು. ಸುಬ್ಬಿ ವಿಚಾರ ಮಾಡು ನಮಗ ಆಸ್ತಿ ಇಲ್ಲ, ರೊಕ್ಕ ಇಲ್ಲ, ಮತ್ಯ್ಯಾರ ಮಾಡ್ಕೋತಾರ ನಿನ್ನ ನೀ ಒಪ್ಪದಿದ್ರ ನಾ ಬಾವಿ ಬೀಳ್ತಿನಿ.'

ಸುಬ್ಬಿ ಮಾತನಾಡಲಿಲ್ಲ.

ಮುಂದೆ ಅರ್ಧಗಂಟೆಯಲ್ಲೆ ಮದುವೆಶಾಸ್ತ್ರ ಮುಗಿಸಿ ಹೋಳಿಗೆ ಊಟ ಉಂಡು ಅಚ್ಚಕ್ಕ ಸಂಜೆಯೇ ಬಂಡಿ ಹೂಡಿಸಿ ಬೇವೂರಿಗೆ ಅಳಿಯ–ಮಗಳ ಮೆರವಣಿಗೆ ತಂದಾಗಲೇ ಬೇವೂರಿನ ಜನರೆಲ್ಲ ಎದೆಗೆ ಕೈಯಿಟ್ಟು 'ಅವ್ವಯ್ಯಾ ಅಚ್ಚಕ್ಕ, ಸುಬ್ಬಿ ಕುತಗಿ ಕೊಯದ್ಲು' ಎಂದರು.

ಅಚ್ಚಕ್ಕ ಯಾವುದಕ್ಕೂ ಕಿವಿಗೊಡಲಿಲ್ಲ. ಅದೇ ವೇಳೆಗೆ ಬೇವೂರಿಗೆ ಬಂದ ಗೋಪಾಲ ಸಿಟ್ಟಿನಿಂದ,

'ಅವ್ವಾ ಘಾತ ಮಾಡದಿ. ಹುಸೇನಿ, ನೀಲಿ ಸಾಕಾಗಲಿಲ್ಲೇನು ನಿನ್ನ ತಮ್ಮಗ– ಹಿಂಗ ಮಾಡ್ಲಿಕ್ಕೆ ನಿನಗೆ ಯಾರು ಹೇಳಿದ್ರು' ಎಂದ.

'ಯಾರ್‍ಯಾಕ ಹೇಳಬೇಕೊ ಪಡಶಂಟ. ನನಗ ಎಲ್ಲಾ ತಿಳೀತದ. ಇವತ್ತ ನಾವು ಉಣ್ಣು ಕೂಳು ಬಂಡೆಪ್ಪಂದ ತಿಳೀತೇನು. ಸುಬ್ಬಿಗೆ ಇದಕಿಂತಾ ಛಲೋ ವರಾ ಎಲ್ಲಿ ಸಿಗ್ತಿತ್ತು? ಹತ್ತು ಕೂರ್ಗಿ ಹೊಲಾ ಎಲ್ಲಿ ಸಿಗ್ತಿತು? ಜೀವಮಾನ ಇರೊತನ್ಕ ನನ್ನ ಹಾದಿ ಏನು? ನೀ ಅಂತೂ ಊರಾಳ. ನಿಂದ ನಿನಗ ನೆಲಿ ಇಲ್ಲ, ಇನ್ನ ನನ್ನ ಹೊಟ್ಟಿ ಏನ ತುಂಬಿಸ್ತಿ' ಅಚ್ಚಕ್ಕ ಮಗನ ಬಾಯಿ ಬಡೆದಳು.

'ಹಂಗಂತ ಸುಬ್ಬಿ ಕೊರಳ ಕೊಯ್ಯದೇನು? ಇದಕ್ಕಿಂತ ಭಿಕ್ಷಾ ಬೇಡಿ ತಿನ್ನೋದು ಛಲೋ.'

'ಹೌದೇನು, ಹೋಗು ಅಂಗಾರ. ಹ್ಯಾಂಗೂ ನಿಮ್ಮಪ್ಪ ಗೋಪಾಲದ ತಂಬಿಗಿ ಇಲ್ಲೆ ಬಡದ ಹೋಗ್ಯಾರ.'

ಅಚ್ಚಕ್ಕನ ಮಾತಿನಿಂದ ಗೋಪಾಲಿ ಕಾಲಪ್ಪಳಿಸುತ್ತ ಬೇವೂರಿನ ದಿಬ್ಬವಿಳಿದು ಹೋದವ ನಾಲ್ಕಾರು ವರ್ಷಗಳಾದರೂ ಈ ಕಡೆ ಬರಲಿಲ್ಲ. 'ಅವನು ಅವರಪ್ಪಗತೆ ದೇಶಾಂತರ ಹೋದ ಕಾಣಸ್ತದ ಹಾಳಾಗಿ ಹೋಗವಲ್ಯಾಕ' ಎಂದು ತನ್ನ ದುಃಖ ತೀರಿಸಿಕೊಂಡಿದ್ದಳು ಅಚ್ಚಕ್ಕ.

ಈಗಂತೂ ಸುಬ್ಬಿಗೆ ತನ್ನ ಸಂಸಾರ ಕಂಡರೆ ಹೇಸಿಗೆ ಎನಿಸುತ್ತಿತ್ತು. ಮದುವೆಯಾದ ದಿನಗಳಲ್ಲಿ ಸುಬ್ಬಿಯ ಗಂಟಲಲ್ಲಿ ಮಾತುಗಳು ಹೇಳಲಾರದ ದುಃಖ ಒತ್ತಿ ನಿಂತಿವೆ. ಅಪ್ಪ ದೇಶಾಂತರ ಹೋಗಿರದಿದ್ದರೆ? ನಾ ಹರೆಯಕ್ಕೆ ಬಾರದಿದ್ದಿದ್ದರೆ ಹೀಗೆಲ್ಲ ನಡೆಯುತ್ತಿರಲಿಲ್ಲ ಎನ್ನುವ ಆಂತರಿಕ ವೇದನೆ ಸುಬ್ಬಿಯನ್ನು ಜೀವಸಹಿತ ಕೊಲ್ಲುತ್ತಿದೆ. ಈಗೀಗಲಂತೂ ಸುಬ್ಬಿಗೆ ರಾತ್ರಿ ಬಂಡೆಪ್ಪ ಹತ್ತಿರ ಬಂದರೆ ಮೈಮೇಲೆ ಮುಳ್ಳುಗಳೇಳುತ್ತಿದ್ದವು. 'ಸುಬ್ಬಿ ನಿನ್ನ ಗಂಡನ ಕೈ ಕಾಲು ತೊಳ್ಕೋಳಿಕ್ಕೆ ನೀರ ಕೊಡssss,' ಎಂದು ಅಚ್ಚಕ್ಕ ಅಂದರೆ, ಅದೇ ತಂಬಿಗೆ ಅವನ ಮುಖಕ್ಕೆಸೆದು ಬೇವೂರಿನ ದಿಬ್ಬವಿಳಿದು ಓಡಿ ಹೋಗಬೇಕೆನಿಸುತ್ತಿತ್ತು.

ರಾತ್ರಿ ಅವಳ ಸಪೂರ ಮೈಮೇಲೆ ತೋಳದಂತೆ ಬೀಳುವ ಬಂಡೆಪ್ಪ ಮುಂದಿನ ಘಳಿಗೆಯಲ್ಲಿ